ಶ್ರಿ ಮಾಲೀಕಯ್ಯ ಗುತ್ತೇದಾರ್:- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೇಳಿದ ಹಾಗೆ ಇದು ಕನ್‌ಸ್ಯೂಮರ್ ಪ್ರೊಟೆಕ್ಷನ್ ಆಕ್ಟ್ ಪ್ರಕಾರ ರಿಟೈರ್ಡ್ ಜಡ್ಜ್ ಒಬ್ಬರನ್ನು ನೇಮಕಾತಿ ಮಾಡುವ ಒಂದು ಕಾನೂನಿನ ಚೌಕಟ್ಟು ಇರುವುದರಿಂದ ಅದಕ್ಕೆ ಒಂದು ಏಜ್ ಲಿಮಿಟ್ ಕೂಡ ಆ ಆಕ್ಟ್‌ನಲ್ಲಿದೆ. 67 ವಯಸ್ಸು ಒಳಗಡೆ ಇರುವವರಿಗೆ ನಾವು ನೇಮಕಾತಿ ಮಾಡಬೇಕೆಂದು ಇದ್ದೇವೆ. ಜಡ್ಜ್‌ಗಳು ರಿಟೈರ್‌ಮೆಂಟ್ ಆಗುವುದು 62ನೇ ವಯಸ್ಸಿನಲ್ಲಿ. ಐದು ವರ್ಷವಾದರೂ ಅವರಿಗೆ ಸೇವೆ ಮಾಡಲಿಕ್ಕೆ ಒಂದು ಅವಕಾಶ ಸಿಗಲಿ ಎಂದು ತಿಳಿದುಕೊಂಡು ಇದೊಂದು ಆಕ್ಟ್ ಮಾಡಿರುವುದರಿಂದ ನಾವು ಅಧಿಕಾರ ತೆಗೆದುಕೊಂಡು ಒಂದು ವಾರದಿಂದ ನಾನು ಆದೇಶ ಕೊಟ್ಟಿದ್ದೇನೆ. ಯಾರು ಒಳ್ಳೆಯ ಒಬ್ಬ ರಿಟೈರ್ಡ್ ಜಡ್ಜ್ ಇದ್ದಾರೆ, ಅವರನ್ನು ನಾವು ಕೂಡಲೇ ನೇಮಕಾತಿ ಮಾಡಿ....

ಅಧ್ಯಕ್ಷರು:- ನನಗೂ ಹೇಳಿದ್ದಿರಿ.

ಶ್ರಿ ಮಾಲೀಕಯ್ಯ ಗುತ್ತೇದಾರ್:- ತಮ್ಮ ಗಮನಕ್ಕೂ ಕೂಡ ನಾನು ತಂದಿದ್ದೇನೆ. ಸಧ್ಯದಲ್ಲಿಯೇ ಇದರ ಬಗ್ಗೆ ಕಾರ್ಯತಂತ್ರ ಶೋಧನೆ ಮಾಡುತ್ತೇನೆ ಎಂದು ಮಾನ್ಯ ಸದಸ್ಯರಿಗೆ ಹೇಳುತ್ತೇನೆ.

ಶ್ರೀ ಎಸ್.ಸುರೇಶ್‌ಕುಮಾರ್:- ಮಾನ್ಯ ಸಭಾಧ್ಯಕ್ಷರೇ, ಒಂದೇ ಒಂದು ಕ್ಲಾರಿಫಿಕೇಷನ್. ಇವರ ಪ್ರಶ್ನೆ ಶಾಶ್ವತ ಹಿಂದುಳಿದ ವರ್ಗಗಳ ಆಯೋಗ ಎಂದು ಇದೆ. ಇದು ಹಿಂದುಳಿದ ವರ್ಗಗಳ ಶಾಶ್ವತ ಆಯೋಗವೋ ಅಥವಾ ಈ ವರ್ಗಗಳನ್ನೆಲ್ಲಾ ಪರ್ಮನೆಂಟ್ ಆಗಿ ಹಿಂದುಳಿಸುವಿಕೆಗೆ ಸರ್ಕಾರದ ಯೋಜನೆ ಏನಾದರೂ ಇದೆಯೇ?

MR.SPEAKER:- It is a very interesting question.

ಶ್ರೀ ಎಸ್.ಸುರೇಶ್‌ಕುಮಾರ್:- ಶಾಶ್ವತ ಹಿಂದುಳಿದ ವರ್ಗಗಳ ಆಯೋಗವೋ, ಅಥವ ಹಿಂದುಳಿದ ವರ್ಗಗಳ ಶಾಶ್ವತ ಆಯೋಗವೋ ಎಂದು ನನಗೆ ಉತ್ತರ ಬೇಕು.

ಶ್ರಿ ಮಾಲೀಕಯ್ಯ ಗುತ್ತೇದಾರ್:- ಅದು ಪ್ರಿಂಟಿಂಗ್ ತಪ್ಪಾಗಿದ್ದರೆ ಸರಿಪಡಿಸೋಣ.

ಅಧ್ಯಕ್ಷರು:- ಹಿಂದುಳಿದ ವರ್ಗಗಳ ಶಾಶ್ವತ ಆಯೋಗ.

ಶ್ರೀ ಎಸ್.ಸುರೇಶ್‌ಕುಮಾರ್:- ಇಂಗ್ಲೀಷ್‌ನಲ್ಲೂ ಹಾಗೆ ಇದೆ ಸ್ವಾಮಿ. ಇಂಗ್ಲೀಷ್‌ನಲ್ಲಿ ಕೂಡ whether the constitution of Permanent Backward Classes Commission....

ಅಧ್ಯಕ್ಷರು:- ಯಾರೋ ನನ್ನಂಥವರು ಟ್ರಾನ್ಸ್‌ಲೇಟ್ ಮಾಡಿರುತ್ತಾರೆ. Why do you worry.

ವಿಷಯ:- ಕೊಪ್ಪಳನಗರದಲ್ಲಿ ಪೆಟ್ಟಿ ಅಂಗಡಿಗಳನ್ನು ಕೆಡವಿ ಹಾಕಿರುವುದು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 150 (1177)

ಶ್ರೀ ಸಂಗಣ್ಣ ಕರಡಿ (ಕೊಪ್ಪಳ):- ಮಾನ್ಯ ಪೌರಾಡಳಿತ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಕೊಪ್ಪಳ ನಗರದ ಪ್ರಮುಖ ಬೀದಿಗಳಲ್ಲಿ ಬಡಜನರು ಡಬ್ಬ ಅಂಗಡಿಗಳನ್ನಿಟ್ಟು ಜೀವನ ಸಾಗಿಸುತ್ತಿದ್ದು, ಇತ್ತೀಚೆಗೆ ನಗರಸಭೆ ಡಬ್ಬಲ್ ರೋಡ್ ಮಾಡುವ ಉದ್ದೇಶದಿಂದ ಸುಮಾರು 300 ಡಬ್ಬ ಅಂಗಡಿಗಳನ್ನು ತೆಗೆಸಿರುವ ಪ್ರಸಂಗದಲ್ಲಿ ಅವರೆಲ್ಲಾ ನಿರ್ಗತಿಕರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2. ಹಾಗಿದ್ದಲ್ಲಿ ಈ ನಿರ್ಗತಿಕರಾದ ಬಡ ಜನರಿಗೆ ಕೈಗಾರಿಕಾ ಪ್ರದೇಶದ ತರಹ ಕೆಲವು ಸ್ಥಳಗಳನ್ನು ನೀಡಿ ಅವರ ಅಭಿವೃದ್ಧಿಕಾಗಿ ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಮಿರಾಜುದ್ದೀನ್ ಎನ್.ಪಟೇಲ್ (ಪೌರಾಡಳಿತ ಸಚಿವರು):-

1. ಹೌದು.

2. ಸದ್ಯಕ್ಕೆ ಸರ್ಕಾರದ ಮುಂದೆ ಇಂತಹ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

ಶ್ರೀ ಸಂಗಣ್ಣ ಕರಡಿ:- ಮಾನ್ಯ ಅಧ್ಯಕ್ಷರೆ, ಕೊಪ್ಪಳ ನಗರದಲ್ಲಿ ಪ್ರಮುಖ ಬೀದಿಗಳ ರಸ್ತೆ ಬದಿಯಲ್ಲಿ ಅನೇಕ ಪೆಟ್ಟಿ ಅಂಗಡಿಗಳನ್ನು ಹಾಗೂ ಚರ್ಮ ಕುಟೀರಗಳು ಹಾಗೂ ಇನ್ನೂ ಅನೇಕ ಜೀವನೋಪಾಯದಲ್ಲಿ ಇರತಕ್ಕಂಥ ಜನಾಂಗದವರಿದ್ದಾರೆ. ಸುಮಾರು 300 ಜನ ಅಂತಹ ಒಂದು ಜೀವನ ಸಾಗಿಸತಕ್ಕ ಜನಾಂಗಕ್ಕೆ ಆ ಒಂದು ನಿವೇಶನ ಖಾಲಿ ಮಾಡಿಸುವ ಕಾರ್ಯಕ್ರಮ ಗಮನಕ್ಕೆ ಬಂದಿದೆಯೇ ಎಂಬ ಪ್ರಶ್ನೆಗೆ 'ಹೌದು' ಎಂದು ಹೇಳಿ ಸರ್ಕಾರ ಉತ್ತರವನ್ನು ಕೊಟ್ಟಿದೆ. ಎರಡನೆಯ ಪ್ರಶ್ನೆಯಲ್ಲಿ ಹಾಗಿದ್ದಲ್ಲಿ ಸರ್ಕಾರ ಈ ನಿರ್ಗತಿಕರಾದ ಬಡ ಜನರಿಗೆ ಕೈಗಾರಿಕಾ ಪ್ರದೇಶದ ತರಹ ಕೆಲವು ಸ್ಥಳಗಳನ್ನು ನೀಡಿ ಅವರ ಅಭಿವೃದ್ಧಿಗೆ ಜೀವನೋಪಾಯಕ್ಕೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತೀರಾ ಎಂಬ ಪ್ರಶ್ನೆಗೆ ಸದ್ಯಕ್ಕೆ ಸರ್ಕಾರದ ಮುಂದೆ ಇಂತಹ ಯಾವುದೇ ಪ್ರಸ್ತಾವನೆ ಇರುವುದಿಲ್ಲ ಎಂದು ಉತ್ತರ ನೀಡಿದ್ದಾರೆ. ಆದರೆ ನನಗೆ ಬಹಳ ನೋವಿನ ಪ್ರಶ್ನೆ....

ಅಧ್ಯಕ್ಷರು:- ನಿಮ್ಮ ಅನುಕೂಲಕ್ಕೆ ನಾನು ಗೈಡ್ ಮಾಡುತ್ತೇನೆ. ನೀವು ಮೊದಲನೆಯ ಪ್ರಶ್ನೆ ಕೇಳಿರತಕ್ಕದ್ದು ಪುರಸಭೆಯ ವ್ಯಾಪ್ತಿಯೊಳಗೆ ಬರತಕ್ಕ ಅಂಗಡಿಗಳನ್ನು ಕೆಡವಿರುವುದು ಹೌದಾ ಎಂಬ ಪ್ರಶ್ನೆ. ಅದು ಅವರ ಇಲಾಖೆಗೆ ಬರತಕ್ಕದ್ದು. ಇವರಿಗೆ ಪುನರ್ ವಸತಿ ಕಲ್ಪಿಸತಕ್ಕಂಥ ಕೆಲಸ ಕೈಗಾರಿಕಾ ಇಲಾಖೆಗೆ ಸಂಬಂಧಿಸಿದಂತೆ ಕೇಳಿದ್ದೀರಿ. ಅದನ್ನು ಅವರು ಹೇಳಬೇಕು, ಇವರು ಹೇಗೆ ಉತ್ತರ ಹೇಳುತ್ತಾರೆ?

ಶ್ರೀ ಸಂಗಣ್ಣ ಕರಡಿ:- ಅವರಿಗೆ ಬೇರೆ ಆಲ್ಟರ್‌ನೇಟೀವ್ ವ್ಯವಸ್ಥೆ ಮಾಡಿದರೆ ಸಾಕು. ಕೈಗಾರಿಕೆ ಎಂತಲ್ಲ.

ಅಧ್ಯಕ್ಷರು:- ನಿಮ್ಮ ಪ್ರಶ್ನೆ ಇರುವುದು, ಹಾಗಿದ್ದಲ್ಲಿ ನಿರ್ಗತಿಕರಾದ ಬಡ ಜನರಿಗೆ ಕೈಗಾರಿಕಾ ಪ್ರದೇಶದ ತರಹ ಕೆಲವು ಸ್ಥಳಗಳನ್ನು ನೀಡಿ ಅವರ ಅಭಿವೃದ್ಧಿಗಾಗಿ

ಸರ್ಕಾರದವರು ಕ್ರಮ ಕೈಗೊಳ್ಳುವರೇ? ಇದಕ್ಕೆ ಪೌರಾಡಳಿತ ರಾಜ್ಯ ಸಚಿವರು ಹೇಗೆ ಉತ್ತರ ಹೇಳುತ್ತಾರೆ? ಈಗ ಒಂದು ಕೆಲಸ ಮಾಡಿ. ನಾನು ನಿಮ್ಮ ಸಮಸ್ಯೆ ಪರಿಹಾರ ಮಾಡಿಕೊಡುತ್ತೇನೆ. ಯಾರು ರೋಡ್ ಸೈಡ್ ಈ ಮುನಿಸಿಪಲ್ ಲಿಮಿಟ್ಸ್‌ನಲ್ಲಿ ಶಾಪ್ಸ್ ಇಟ್ಟುಕೊಂಡಿರುತ್ತಾರೆ, ನ್ಯಾಚುರಲಿ ನಿಮ್ಮವರು ಹೋಗಿ ಅಲ್ಲಿ ಎವಿಕ್ಷನ್ ಮಾಡಿಸಿರುತ್ತಾರೆ. ಅವರೆಲ್ಲಾ ಬಡ ಜನ ಆದ್ದರಿಂದ ಅವರಿಗೆ ಬೇರೆಲ್ಲಾದರೂ ಜೀವನ ಮಾಡಿಕೊಳ್ಳಲು ವ್ಯವಸ್ಥೆ ಮಾಡಿ.

ಶ್ರೀ ಮಿರಾಜುದ್ದೀನ್ ಎನ್.ಪಾಟೀಲ್:- ಸನ್ಮಾನ್ಯ ಅಧ್ಯಕ್ಷರೆ, ಈಗ ಆದೇ ರೀತಿ ಲೋಕೋಪಯೋಗಿ ಇಲಾಖೆಯ ರೋಡ್ ಇದೆ. ಈಗ ಅಲ್ಲೇನು 300 ಜನ ಪೆಟ್ಟಿ ಅಂಗಡಿಯವರು ಬಿಸಿನೆಸ್ ಹಚ್ಚಿಕೊಂಡಿದ್ದರು, ಅದಕ್ಕೆ ಮುನಿಸಿಪಾಲಿಟಿಯವರು ಏನೂ ಪರ್ಮಿಷನ್ ಕೊಟ್ಟಿರಲಿಲ್ಲ ಅಥವಾ ಮುನಿಸಿಪಾಲಿಟಿಯಿಂದ ಅವರಿಗೆ ಯಾವ ಸೈಟೂ ಅಲಾಟ್‌ಮೆಂಟ್ ಮಾಡಿದ್ದುದು ಇಲ್ಲ. ವೆಹಿಕಲ್ಸ್ ಮತ್ತು ಜನರಿಗೆ ಓಡಾಡಲಿಕ್ಕೆ ತೊಂದರೆ ಆಗುತ್ತಿದೆ ಎಂದು ಮತ್ತು ಲೋಕೋಪಯೋಗಿ ಇಲಾಖೆಯವರು ಡಬ್ಬಲ್ ರೋಡ್ ಮಾಡುವ ಬಗ್ಗೆ ಅವರದ್ದು ಒಂದು ಪ್ರಪೋಸಲ್ ಇದೆ. ಅದಕ್ಕೋಸ್ಕರ ಅದನ್ನು ಖಾಲಿ ಮಾಡಿ ಕೊಟ್ಟಿದ್ದೇವೆ. ಮತ್ತು ಅವರದ್ದು ನಮಗೆ ಯಾವುದೇ ರೀತಿಯ ಪ್ರಪೋಸಲ್ ಬಂದಿಲ್ಲ. ಆದರೆ ಅಲ್ಲಿ ಯಾವುದೇ ಮುನಿಸಿಪಾಲಿಟಿ ಸೈಟ್ ಬೇರೆ ಇದ್ದರೆ ಅವರಿಗೆ ಅದನ್ನು ತೆಗೆಸಿಕೊಡುವಂತಹ ವ್ಯವಸ್ಥೆಯನ್ನು ನಾನು ಮಾಡುತ್ತೇನೆಂದು ತಮ್ಮ ಮೂಲಕ ಆಶ್ವಾಸನೆ ಕೊಡುತ್ತೇನೆ.

ಶ್ರೀ ಸಂಗಣ್ಣ ಕರಡಿ:- ಸಚಿವರು ಹೇಳಿದ್ದನ್ನು ನಾನೂ ಕೂಡ ಸ್ವಾಗತಿಸುತ್ತೇನೆ. ಆದರೆ 300 ಜನ ಬಡವರ್ಗದ ಜನಾಂಗಕ್ಕೆ ಬೇರೆ ನಮ್ಮ ಮುನಿಸಿಪಾಲಿಟಿಯ ವ್ಯಾಪ್ತಿಯಲ್ಲಿ ಸೈಟ್ಸ್ ಇಲ್ಲ. ಅದಕ್ಕಾಗಿ ಈ ಒಂದು ಪ್ರಪೋಸಲ್ ಮೂಲಕವಾಗಿ ಬೇಡಿಕೆಯನ್ನು ಪ್ರಸ್ತಾವನೆ ಮಾಡಿದ್ದೇನೆ. ಆ ಕಾರಣಕ್ಕಾಗಿ ಅವರಿಗೆ ಬೇರೆ ಒಂದು ಜಾಗವನ್ನು ಆಯ್ಕೆ ಮಾಡಿ ಸ್ಥಳಾವಕಾಶವನ್ನು ಮಾಡಿಕೊಡಬೇಕೆಂದು ಅಧ್ಯಕ್ಷರ ಮೂಲಕ ತಮ್ಮಲ್ಲಿ ಮನವಿ ಮಾಡುತ್ತೇನೆ.

ಶ್ರೀ ಮಿರಾಜುದ್ದೀನ್ ಎನ್.ಪಾಟೀಲ್:- ಸನ್ಮಾನ್ಯ ಅಧ್ಯಕ್ಷರೆ, ಮುನಿಸಿಪಾಲಿಟಿಯಲ್ಲಿ ಬೇರೆ ಯಾವುದೇ ಸೈಟ್ ಇಲ್ಲ ಎಂದರೆ ನಮಗೂ ಮಾಡಲು ತೊಂದರೆ ಇದೆ. ಬೇರೆ ನಾವು ಲ್ಯಾಂಡ್ ಅಕ್ವೈರ್ ಮಾಡಿ ಸೈಟ್ ತೆಗೆದುಕೊಳ್ಳಬೇಕು ಎಂದರೆ ನಮ್ಮ ಹತ್ತಿರ ಫೈನಾನ್ಸಿಯಲ್ ಪೊಸಿಷನ್ ಅಷ್ಟು ಇಲ್ಲ. ನಮ್ಮದೇನು ಡಿಸ್ಕ್ರಿಪ್ಷನ್ ಫಂಡ್ ಇದೆ. ಅದನ್ನು ಬಿಟ್ಟು ಕೆಲಸ ಮಾಡುವುದಕ್ಕೆ ನಮಗೂ ಕಷ್ಟ ಆಗುತ್ತದೆ. ಆದಷ್ಟು ಬೇಗ ನಾವು ಅಲ್ಲಿಂದ ರಿಪೋರ್ಟ್ ತರಿಸಿ ಅವರಿಗೆ ಏನೋ ವ್ಯವಸ್ಥೆ ಮಾಡಿಸಲು ನಾನು ಪ್ರಯತ್ನ ಮಾಡುತ್ತೇನೆ.

ವಿಷಯ:- ಆಲೂರಿಗೆ ಕುಡಿಯುವ ನೀರಿನ ಸರಬರಾಜು.